# ಆಯುರ್ವೇದದ

# ಹೊಸ 'ಅರ್ಥ'



## 'ನೋಡಿ ಇಲ್ಲಿ'

ಸಂಶೋಧನಾ ಪುಸ್ತಕದ ಹಾಳೆ ಮುಂದಿಟ್ಟು ಅವರು ನಕ್ಕರು. ಹಾಳೆಯಲ್ಲಿದ್ದ ಇಂಗ್ಲೀಷ್ ಲೇಖನದ ಸಾರಾಂಶ ಇಷ್ಟೇ: ಜಾಂಡೀಸ್‌ಗೆ ನೆಲನೆಲ್ಲಿ ಮದ್ದು.

'ನಮ್ಮ ಅಜ್ಜ-ಅಜ್ಜಿ ಎಲ್ಲರಿಗೂ ನೆಲನೆಲ್ಲಿ ಗೊತ್ತು. ಅದರ ಬಳಕೆ ಗೊತ್ತು. ಇದನ್ನು ತಮ್ಮ ಸಂಶೋಧನೆ ಎನ್ನುತಾರಲ್ರೀ' ಅವರ ಮುಖದಲ್ಲಿ ವಿಷಾದ. ಅಸಮಾಧಾನ. ಧ್ವನಿಯಲ್ಲಿ ಆಕ್ಷೇಪ. ಹೀಗೆ ನಮ್ಮ ಹಿತ್ತಲ ಮದ್ದನ್ನೇ ತಮ್ಮ ಸಂಶೋಧನೆ ಎನ್ನುತ್ತಾ ಲೇಖನ ಪ್ರಕಟಿಸುವ ಜಾಗತಿಕ ಮಟ್ಟದ ವ್ಯೂಹದ ಬಗೆಗೆ ಗಮನ ಸೆಳೆಯುತ್ತಾರೆ ವೈದ್ಯ ಡಾ. ಪ್ರಶಾಂತ್ ಎಸ್. ಆಚಾರ್ಯ.

> 'ಅರ್ಥ'ನ ವೈಶಿಷ್ಟ್ಯ ಇರುವುದೇ ಆಧುನಿಕ ಬದುಕಿನ ಅಗತ್ಯಗಳಿಗೆ ಆಯುರ್ವೇದದ ವೈದ್ಯತಂತ್ರಗಳನ್ನು ಯಶಸ್ವಿಯಾಗಿ ಬಳಸುವುದರಲ್ಲಿ.

ಬೆಂಗಳೂರಿನ ಇಂದಿರಾನಗರದಲ್ಲಿರುವ 'ಅರ್ಥ' ಆಯುರ್ವೇದದ ಹೊಸನೆಲೆಗಳಿಗೆ ತೆರೆದುಕೊಳ್ಳುತ್ತಿರುವ ಅವರ ಸಂಸ್ಥೆ. ಕಡಕೋಳದ ತರುಣ ಪ್ರಶಾಂತ್ ಇದರ ನಿರ್ದೇಶಕರು. ಬೆಂಗಳೂರು ಆಯುರ್ವೇದ ವೈದ್ಯ ವಿದ್ಯಾಲಯದ ಐದು ಮಂದಿ ವಿದ್ಯಾರ್ಥಿಗಳು ಕಂಡ ಕನಸು 'ಅರ್ಥ'. ಉಳಿದವರು ಕಾರ್ಯನಿಮಿತ್ತ ವಿವಿಧ ಕಡೆ ದಿಕ್ಪಾಲು. ಪ್ರಶಾಂತ ಮಾತ್ರ ಈಗ ಊರುಗೋಲು. ಬೆನ್ನಿಗೆ ನಿಂತು ಪ್ರೋತ್ಸಾಹಿಸಿದವರು ಉದ್ಯಮಿ ರಜತ್ ಗುಪ್ತ.

'ಅರ್ಥ'ನ ವೈಶಿಷ್ಟ್ಯ ಇರುವುದೇ ಆಧುನಿಕ ಬದುಕಿನ ಅಗತ್ಯಗಳಿಗೆ ಆಯುರ್ವೇದದ ವೈದ್ಯತಂತ್ರಗಳನ್ನು ಯಶಸ್ವಿಯಾಗಿ ಬಳಸುವುದರಲ್ಲಿ. 'ಪಂಚಕರ್ಮ' ಚಿಕಿತ್ಸೆಯನ್ನು ಬಳಸಿ ಮನುಷ್ಯನನ್ನು ಮತ್ತೆ ಹರ್ಷಚಿತ್ತನನ್ನಾಗಿಸುತ್ತಾರೆ. ವೈದ್ಯರೆಲ್ಲ ಕೈಬಿಟ್ಟ ಲಕ್ವ (ಪಾರ್ಶ್ವವಾಯು)ಪೀಡಿತ ರೋಗಿಯನ್ನು ಗುಣಮುಖರನ್ನಾಗಿಸುತ್ತಾರೆ. 'ಅರ್ಥ'ನ ಯುವ ವೈದ್ಯ ಪ್ರಶಾಂತ್ ಯುಎಸ್‌ಎ. ಯು.ಕೆ., ಸಿಂಗಪುರ ಹೀಗೆ ನಾನಾ ದೇಶ ಸುತ್ತಿದ್ದಾರೆ. ಅಲ್ಲಿನ ಅನೇಕ ಸಾಫ್ಟ್‌ವೇರ್ ಕಂಪೆನಿಗಳಿಗೆ ವೈದ್ಯಕೀಯ ಸಲಹೆಗಾರರಾಗಿದ್ದಾರೆ. ಆಯುರ್ವೇದದ ಕುರಿತು ಉಪನ್ಯಾಸ ನೀಡಿದ್ದಾರೆ: ಜಾಗೃತಿ ಮೂಡಿಸಿದ್ದಾರೆ. ಸ್ವತಃ ವಿವಿಧ ಸಂಸ್ಕೃತ ಕೃತಿಗಳ ಅಧ್ಯಯನವನ್ನೂ ನಡೆಸಿದ್ದಾರೆ. ಅಧುನಿಕ ಬದುಕಿನಲ್ಲಿ ಆಯುರ್ವೇದದ ಆಯಾಮದ ಬಗೆಗೆ ಗಂಭೀರವಾಗಿ ಯೋಚಿಸುತ್ತಾರೆ. ಸಿಂಗಪುರ ರೇಡಿಯೋ ಆಯೋಜಿಸಿದ್ದ ವಿಚಾರಸಂಕಿರಣ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಆಯುರ್ವೇದದ ವೈದ್ಯ ಪದ್ಧತಿ ಕುರಿತು ಮಾತನಾಡಿ ಬಂದಿದ್ದಾರೆ. ಅನೇಕ ಜಾಗೃತಿ ಕಾರ್ಯಕ್ರಮಗಳಲ್ಲಿ ರೋಗ ಪ್ರತಿರೋಧದ ಬಗೆಗೆ ಮಾತನಾಡಿದರೆ ಜನ ತೂಕಡಿಸುತ್ತಾರೆ. ರಕ್ತದೊತ್ತಡ. ಸಿಹಿಮೂತ್ರ ರೋಗದ ಬಗೆಗೆ ಮಾತನಾಡಿದರೆ ಮೈಯೆಲ್ಲಾ ಕಣ್ಣಾಗಿ ಕೇಳುತ್ತಾರೆ. ರೋಗ ಬಂದಾಗ ನೋಡಿಕೊಳ್ಳುವ ಎನ್ನುವ ಉದಾಸಿನ ಮನೋಭಾವ ನಮ್ಮಲ್ಲಿ ನೆಲೆಯೂರಿದೆ ಎನ್ನುತ್ತಾರೆ ಅವರು.

ಸಿಹಿಮೂತ್ರ ರೋಗ. ರಕ್ತದೊತ್ತಡ. ಚರ್ಮ ಮತ್ತು ಕೂದಲಿನ ರಕ್ಷಣೆ. ಲೈಂಗಿಕ ಸಮಸ್ಯೆ. ನರಸಂಬಂಧಿ ತೊಂದರೆ. ಉಸಿರಾಟ ಅಡಚಣೆ. ಮಾನಸಿಕ ಒತ್ತಡ ಸಂಬಂಧಿ ತೊಂದರೆ. ಬೆರಳುಗಂಟಿನ ನೋವು. ಕಂಪ್ಯೂಟರ್ ವಿಷನ್ ಸಿಂಡ್ರೋಮ್. ಮೂಳೆ ಮತ್ತು ಗಂಟಿನ ತೊಂದರೆ ಮುಂತಾದ ಕಾಯಿಲೆಗಳಿಗೆ 'ಅರ್ಥ'ನಲ್ಲಿ ಅತ್ಯುತ್ತಮ ಮದ್ದುಂಟು ಎನ್ನುತ್ತಾರೆ ಪ್ರಶಾಂತ್.

ಸಾಫ್ಟ್‌ವೇರ್ ಉದ್ಯಮದಲ್ಲಿ ದುಡಿಯುತ್ತಿರುವ ಮಂದಿಯಲ್ಲಿ ಪ್ರತ್ಯುತ್ಪಾದನಾ ಶಕ್ತಿ ಕುಂಠಿತಗೊಳ್ಳುತ್ತಿದೆ ಎನ್ನುವ ಆತಂಕಕ್ಕೆ 'ಅರ್ಥ'ನಲ್ಲಿ ಚಿಕಿತ್ಸೆ ಇದೆ. 'ವಿಪರೀತ ಒತ್ತಡದ ಕೆಲಸ ಇದಕ್ಕೆ ಕಾರಣ. ಇಂಥ ಪ್ರಕರಣಗಳಿಗೆ ಯಶಸ್ವೀ ಚಿಕಿತ್ಸೆ ನೀಡಿದ್ದೇವೆ. ಗರ್ಭಿಣಿಗೆ ಆಯುರ್ವೇದದ ಪ್ರಕಾರ ಸೂಕ್ತ ಚಿಕಿತ್ಸೆ ನೀಡಿದರೆ ಸಿಸೇರಿಯನ್ ಇಲ್ಲದೆ ಪ್ರಸವ ಸಾಧ್ಯ' ಎನ್ನುವುದು ಪ್ರಶಾಂತ್ ಮಾತು.

[illegible]ವರಿಗೆ ಉಚಿತ ಚಿಕಿತ್ಸೆ ನೀಡುವ ಆಯುರ್ವೇದ ಆಸ್ಪತ್ರೆ, ಅತ್ಯುತ್ತಮ ಆಯುರ್ವೇದ ಸಂಶೋಧನಾ ಕೇಂದ್ರ, ಆಯುರ್ವೇದ ವೈದ್ಯಕೀಯ ಕಾಲೇಜು-ಹೀಗೆ ಹತ್ತು ಹಲವು ಯೋಜನೆಗಳ ಸಾಕಾರದತ್ತ 'ಅರ್ಥ' ಮುನ್ನಡೆಯುತ್ತಿದೆ. ದೂರವಾಣಿ: 080-5288630/5254654

■ ಹೊಸಂಗಡಿ

